ಒಪ್ಪುವುದಾದರೆ ಹೊನ್ನಾವರವೇನು ದೂರವಲ್ಲ ಎಂದು ಸಮಾಧಾನ ತಳೆದು ಸುಮ್ಮನಿದ್ದಳು.

ಇದೆಲ್ಲ ನೆನೆಯುತ್ತ ಸೀತಕ್ಕ ಹೊತ್ತು ಕಳೆದಳು. ಸಂಜೆಯಾದುದೇ ಅವಳಿಗೆ ತಿಳಿಯಲಿಲ್ಲ. ಅದೇ ಬೇಸರದಲ್ಲಿ ಅವಳು ಮುಂದೆ ಎರಡು ದಿನ ಊಟ ಮಾಡಲಿಲ್ಲ. ಚಕ್ಕುಲಿ, ಮಿಠಾಯಿ ಮಾಡುವುದಕ್ಕೂ ಅವಲಕ್ಕಿ ಕುಟ್ಟುವುದಕ್ಕೂ ಕೈಹಾಕಲಿಲ್ಲ. ದಂಧೆ ನಿಲ್ಲಿಸಿದ ಆ ಹೊತ್ತಿಗೆ ಮಂದಿ ಬಂದು ಬಂದು ಖಾಲಿ ಚೀಲ ಹಿಡಿದೇ ಹಿಂದಿರುಗುತ್ತಿದ್ದರು. ಗಿರಾಕಿಗಳತ್ತ ಅವಳ ಮನಸ್ಸು ಹರಿಯುತ್ತಿದ್ದಿಲ್ಲ. ಹಣ, ಗಳಿಕೆ, ಜೀವನ ಯಾವುದರ ಬಗ್ಗೆಯೂ ಅವಳಿಗೆ ಉತ್ಸುಕತೆಯೇ ಇದ್ದಿಲ್ಲ. ಎಲ್ಲವನ್ನೂ ಬಿಟ್ಟು ಅವಳು ತನ್ನ ಮನಸ್ಸಿನ ತಪ್ಪಿದ ಲೆಕ್ಕಾಚಾರಕ್ಕಾಗಿ ಮರುಗುತ್ತಿದ್ದಳು.

ಹೀಗೇ ಮುಂದೆ ಒಂದು ತಿಂಗಳು! ಊರಿನ ವಾತಾವರಣ ಬದಲಾಗುತ್ತಿರುವ ಸಮಯ ಅದು. ಮಳೆಗಾಲದ ಮಂಕು ಹೋಗಿ ಓಡಾಡುವ ಹಾಗೆ ಆಗಿದೆ. ಝಳ ಝಳ ಬಿಸಲು ಬೇರೆ ಬೇಕಾದ ಹಾಗೆ ಬೀಳಹತ್ತಿದೆ. ಹಿಂದಿನ ಚಿರಿಚಿರಿ ಮಳೆ ಈಗ ಇಲ್ಲದಿದ್ದರೂ ಅಪರೂಪಕ್ಕೆ ಒಂದೊಂದು ಮಳೆ ಹೊಡೆದು ಹೋಗುವುದುಂಟು– ಕಳೆದುಹೋದ ನೆನಪು ತರುವ ಹಾಗೆ! ಈಗ ಒಂದು ತುಸು ಮಳೆ ಬಿದ್ದರೂ ಊರೆಲ್ಲ ತೊಳೆದು ಸ್ವಚ್ಛ ಮಾಡಿದ ಹಾಗೆ ಕಾಣುತ್ತಿದೆ. ದಿನಗಳು ಶುಭ್ರವಾದವುಗಳು. ಕಾಂತಿಯುತವಾಗಿ, ಅದಾಗಲೇ ಸಿಂಗರಿಸಿ ತಯಾರಾದ ಸಾರಸ್ವತರ ಹೆಣ್ಣಿನಂತೆ ತೋರುತ್ತಿತ್ತು– ಇಡೀ ಹಗಲು! ಗದ್ದೆಯ ಕೊಯಿಲು ದೂರವಿಲ್ಲ. ಬರುವ ಷಷ್ಠಿ ತೇರಿನ ಬಯಲಾಟದ ತಯ್ಯಾರಿ ನಡೆಸಬೇಕೆಂದು ಮೃದಂಗವನ್ನು ಕಟ್ಟಿ ಬಡಿದು ನೋಡುವ ಆ ಧ್ವನಿ ಊರೆಲ್ಲ ಎಚ್ಚರಪಡಿಸಿ ಬರುವ ಮಾತಿನಂತೆ ಕೇಳುತ್ತಿತ್ತು. ಚರ್ಮ ಕಟ್ಟಿ, ಬಳ್ಳಿ ಬಿಗಿದು ಕಟ್ಟಿಗೆಯ ಪೊಳ್ಳು ಹೊಟ್ಟೆಯಿಂದ ಧ್ವನಿ ತರಿಸುವ ಆತುರ ಹೊಲೆಯರ ಈರನಿಗೆ. ಗೇಯ್ಮೆಯ ಒಂದೊಂದು ಸಾಧನಗಳು ಅದರಿಂದ ಗಳಿಕೆಯೂ ಬರುವ ಹೊತ್ತಿದು. ಈಗೊಂದೆರಡು ತಿಂಗಳು ಯಾರಿಗೂ ವಿಶ್ರಾಂತಿ ಇಲ್ಲ. ಕೆಲವರಿಗೆ ಗದ್ದೆಯ ಕೆಲಸ, ಹಲವರಿಗೆ ಮನೆಯಲ್ಲಿ ಕೆಲಸ– ಕಣಜ ಕಟ್ಟುವುದು, ಮಣ್ಣು ಹಾಕಿ ಅಂಗಳ ಮಾಡುವುದು, ಒಳ್ಳು ತೋಡುವುದು, ಚಪ್ಪರಕ್ಕೆ ಕಂಬ ಹುಗಿಯುವುದು– ಇವಷ್ಟೇ ಅಲ್ಲದೇ ಅತ್ತ ಬ್ರಾಹ್ಮಣರಿಗೆ ಮುಂಜಿ ಮದುವೆಗಳ ಮುಹೂರ್ತ ನೋಡುವುದು, ಜಾತಕ ತಯಾರಿಸುವುದು, ನೋಡುವುದು– ಒಂದೇ ಎರಡೇ! ಹೊಲೆಯರಿಂದ ಬ್ರಾಹ್ಮಣರವರೆಗೆ ಎಲ್ಲರಿಗೂ ಕೆಲಸ. ಮಳೆಗಾಲದ ಮಬ್ಬು ಹರಿದುಹೋಗಿದೆ; ಆಲಸ್ಯ ಅಡಗಿಕೊಂಡುಬಿಟ್ಟಿದೆ. ಕಾಲಹರಣದ ಹರಟೆಗೆ, ದೇವಸ್ಥಾನದಲ್ಲಿಯ ಇಸ್ಪೀಟಿನಾಟಕ್ಕೆ, ಅಂಗಡಿಯ ಕಟ್ಟೆಯ ಮೇಲೆ 'ನೊಣಬಿಲ್ಲಿ' ಆಟಕ್ಕೆ ಈಗ ಸವುಡು ಇಲ್ಲ. ಅಂತೆಯೇ ಸೀತಕ್ಕನಿಗೂ ಮುಂಜಾನೆ ಗಂಗಾವಳಿಯ ಬಸ್ಸುಬರುವ ಹೊತ್ತಿನಿಂದ ಸಂಜೆ ಶಿರ್ಶಿಯ ಬಸ್ಸು ಬರುವವರೆಗೆ ಬಿಡುವೇ ಇಲ್ಲ. ಒಂದೆಡೆ ಮಿಠಾಯಿ ಭಟ್ಟಿ, ಒಂದೆಡೆಗೆ ಚಕ್ಕಲಿಯ ಕಾವಲಿಗೆ, ಹಿಂದೆ ಮಿಠಾಯಿ ಮಾಡುವಾಗೆಲ್ಲ ಅವಳಿಗೆ ಸೀತಾ ಸ್ವಯಂವರದ್ದೂ, ಕುದಿಯುವ ಎಣ್ಣೆಯ ಕಾವಲಿಗೆಯಲ್ಲಿ ಚಕ್ಕಲಿ ಬಿಡುವಾಗ ಪ್ರಹ್ಲಾದನದೂ ನೆನಪಾಗುತ್ತಿತ್ತು. ಆದರೆ ಈಗ ಅದೇನೂ ಇಲ್ಲ. ಹುರುಪಾಗಿದ್ದ ಅವಳ ಮನಸ್ಸು ಅದನ್ನು ನೆನಸದೆ ಇನ್ನೇನನ್ನೊ ನೆನೆಸುತ್ತಿದೆ.

ಅವಳ ಮಗಳು ನಾಲ್ಕು ದಿನದ ಕಿರುಕೋಳ ರಜೆಯ ಮೇಲೆ ಬರುತ್ತೇನೆಂದು ಪತ್ರ ಬರೆದಿದ್ದಾಳಂತೆ. ಆದರೆ ನಿಶ್ಚಿತ ದಿನ ತಿಳಿಸಲಿಲ್ಲ. ಸೀತಕ್ಕನಿಗೂ ಈಗ ಮೊದಲಿನ ಹಾಗೆ ಪತ್ರ ಬರೆದುಕೊಡಲು ಮಾಳಪ್ಪ ಶ್ಯಾನುಭೋಗರಿಲ್ಲ. ಅವಳ ಮಗಳು ಬರುವ ಯೋಚನೆಯಲ್ಲಿ ಆಗೀಗ ಮಾಳಪ್ಪ ಶ್ಯಾನುಭೋಗರೂ ಸುಳಿದು ಹೋಗುತ್ತಿದ್ದರು. 'ಅಯ್ಯೋ ಅವರು ಬದುಕಿದ್ದರೇ ತನ್ನ ಮಗಳ ಮದುವೆ ಆಗಿಹೋಗುತ್ತಿತ್ತಲ್ಲ' ಎಂದು ಹಂಬಲವೂ ಒಮ್ಮೊಮ್ಮೆ ಬಂದು ಕಾಡಿ ಹೋಗುತ್ತಿತ್ತು. ಅದರೊಂದಿಗೆ ಮಗಳ ಬರುವಿಕೆಯ ಹಂಬಲವೂ ಸೇರುತ್ತದೆ. 'ಅವಳ ಪತ್ರದಂತೆ